ಇಂದು ದಿಃ **24.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಎಸ್ ಜಿ ಪಾಟೀಲ ವಕೀಲರಿಂದ.**

1. ಮೃತ ಮಹಮ್ಮದ ಶಫಿ ರವರು ನನ್ನ ಗಂಡ ಹಾಗೂ 2 ರಿಂದ 5 ನೇ ಅರ್ಜಿದಾರರ ತಂದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ**.** ನಾನು ಹಾಗೂ **2** ರಿಂದ **5** ನೇ ಅರ್ಜಿದಾರರು ಮೃತ ಮಹಮ್ಮದ ಶಫಿ ರವರ ವಾರಸುದಾರರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಹಮ್ಮದ ಶಫಿ ರವರಿಗೆ ತೀರಿಕೊಳ್ಳುವ ಕಾಲಕ್ಕೆ 34 ವಯಸ್ಸು ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಸದರಿಯವರಿಗೆ ಆ ಕಾಲಕ್ಕೆ 35 ಕ್ಕಿಂತ ಹೆಚ್ಚು ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಹಾಗೂ ಸದರಿ ಮೃತ ಮಹಮ್ಮದ ಶಫಿ ರವರು ಕಿರಾಣಿ ವ್ಯಾಪಾರ ಮಾಡುವ ಮೂಲಕ ತಿಂಗಳಿಗೆ ರೂ.20,000/- ಸಂಪಾದಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸದರಿ ದಿನ ನಾನು , ನನ್ನ ಗಂಡ ಹಾಗೂ ನನ್ನ ಮಗಳು ಮೋಟರ ಸೈಕಲ್ ಮೇಲೆ ಹೊರಟ್ಟಿದ್ದು ರಸ್ತೆಯ ಪಕ್ಕದಲ್ಲಿ ಬೇರೊಂದು ವಾಹನ ಕೆಟ್ಟಿದ್ದು ಸದರಿ ವಾಹನ ಚಾಲಕನಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ನನ್ನ ಗಂಡ ತನ್ನ ಮೋಟರ ಸೈಕಲ್ ನ್ನು ರಸ್ತೆಯ ಪಕ್ಕಕ್ಕೆ ನಿಲ್ಲಿಸಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ನಾನು**,** ನನ್ನ ಗಂಡ ಹಾಗೂ ಮಗಳು ಸದರಿ ಮೋಟರ ಸೈಕಲ್ ಮೇಲೆ ಪ್ರಯಾಣಿಸುತ್ತಿದ್ದೆವು

ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಟಿಪ್ಪರ ನಂ.ಕೆಎ.**25**/ಎಎ-**3840** ರ ಚಾಲಕ ನಿರ್ಲಕ್ಷತನದಿಂದ ಸದರಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ನಮ್ಮ ಮೋಟರ ಸೈಕಲ್ ಗೆ ಡಿಕ್ಕಿ ಪಡಿಸಿದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಸದರಿ ಟಿಪ್ಪರ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಗಂಡ ತನ್ನ ಮೋಟರ ಸೈಕಲ್ ನ್ನು ರಸ್ತೆಯ ಮೇಲೆ ನಿಲ್ಲಿಸಿದ್ದರಿಂದ ಆತನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

**3.** ಸದರಿ ಅಪಘಾತದಲ್ಲಿ ನನ್ನ ಗಂಡನಿಗೆ ತಿವ್ರ ಸ್ವರೂಪದ ಗಾಯಗಳು ಆತ ಸ್ಥಳದಲ್ಲಿ ತಿರಿಕೊಂಡ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಅತನ ಶವ ಪರಿಕ್ಷೆಯನ್ನು ಕುಂದಗೋಳದ ಸರಕಾರಿ ಆಸ್ಪತ್ರೆಯಲ್ಲಿ ಮಾಡಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ನನ್ನ ಗಂಡನ ಶವ ಸಾಗಿಸುವುದಕ್ಕೆ ಮತ್ತು ಅಂತ್ಯ ಸಂಸ್ಕಾರಕ್ಕೆ ರೂ.**50,000/-** ವ್ಯಯಿಸಿರುತ್ತೇನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ನಾವು ಅರ್ಜಿದಾರರು ನನ್ನ ಗಂಡ ಆದಾಯದ ಮೇಲೆ ಅವಲಂಬಿತರಾಗಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ನನ್ನ ಗಂಡ ನಮ್ಮನ್ನು ಆರ್ಥಿಕವಾಗಿ ನೊಡಿಕೊಳ್ಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4. 1** ನೇ ಎದುರುದಾರನು ವಿಮಾ ಷರತ್ತನ್ನು ಉಲ್ಲಂಘನೆ ಮಾಡಿದ್ದರಿಂದ **2** ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಹಾಗೂ ಸದರಿ **1** ನೇ ಎದುರುದಾರನ ಲಾರಿಗೆ ಪರ್ಮಿಟ ಹಾಗೂ ಎಫ್.ಸಿ

ಇರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಸದರಿ ಲಾರಿಯ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದ್ದರಿಂದ **2** ನೇ ಎದುರುದಾರರಿಂದ ನಮಗೆ ಪರಿಹಾರ ಪಡೆಯಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೇ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.